**ದಿನಾಂಕ:- 25-08-2018 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**-: ಮುಂದುವರಿದ ಮುಖ್ಯ ವಿಚಾರಣೆ ಮಾನ್ಯ ವಿಶೇಷ ಪಿ.ಪಿ.ಯವರಿಂದ :-**

15. ದಿನಾಂಕ: 08-12-2011 ರಂದು ಲೋಕಾಯುಕ್ತ ಕಛೇರಿಯವರು ನನಗೆ ಅವರ ಕಛೇರಿ, ಚಿಕ್ಕಮಗಳೂರುನಲ್ಲಿ ನನಗೆ ಬರಲು ಹೇಳಿದರು. ನಾನು ಆ ಪ್ರಕಾರ ಬೆಳಿಗ್ಗೆ 10.30 ಕ್ಕೆ ಕಛೇರಿಗೆ ಹೋದೆ. ಆಗ ನನ್ನ ಜೊತೆ ರಾಮಚಂದ್ರನಾಯಕ್ ಬಂದಿದ್ದರು. ನಾನು ಅಲ್ಲಿ ಹೋದ ನಂತರ 1 ನೇ ಕೃಷ್ಣಕುಮಾರ್, 2 ನೇ ಆರೋಪಿ ರಮೇಶ ಅಲ್ಲಿಗೆ ಬಂದರು. ಮತ್ತು ತಾಲ್ಲೂಕು ಕಛೇರಿಯಿಂದ ವಿಜಯಕುಮಾರ್ ಸರ್ವೆ ಸೂಪರ್ವೈಸರ್ ಕೂಡ ಬಂದಿದ್ದರು. ಅಲ್ಲಿ ಫಿರ್ಯಾದುದಾರ ಸುರ್ಜಿತ್ ಕೂಡ ಹಾಜರಿದ್ದರು. ನಂತರ ಒಬ್ಬರಿಗೊಬ್ಬರಿಗೆ ಗುರುತು ಪರಿಚಯ ಮಾಡಿಸಿದರು.

16. ನಂತರ ಲೋಕಾಯುಕ್ತ ಇನ್ಸ್ ಪೆಕ್ಟರ್ ನ್ಯಾಯಾಲಯದ ಅನುಮತಿ ಪಡೆದು ಈ ಹಿಂದೆ ಸೀಜ್ ಮಾಡಿದ್ದ ಒಂದು ಸಿ.ಡಿ.ಯನ್ನು ತೋರಿಸಿ ಸೀಲ್ ಮಾಡಿದ ಕವರ್ ನ್ನು ಓಪನ್ ಮಾಡಿ ಆ ಸಿ.ಡಿ.ಯನ್ನು ಲ್ಯಾಪ್ ಟಾಪ್ ಗೆ ಹಾಕಿ ಅದರಲ್ಲಿ ಧ್ವನಿಯನ್ನು ಎಲ್ಲರಿಗೂ ಕೇಳಿಸಿದರು. ಆಗ ಲೋಕಾಯುಕ್ತ ಇನ್ಸ್ ಪೆಕ್ಟರ್ ಧ್ವನಿ ಗುರುತಿಸಲು ಆಗುತ್ತದೆಯಾ ಎಂದು ಕೇಳಿದಾಗ ನಾನು ಫಿರ್ಯಾದುದಾರ ಸುರ್ಜಿತ್ ಇವರ ಧ್ವನಿಯನ್ನು ಗುರುತಿಸಿದೆ. ನಂತರ ತರೀಕೆರೆ ತಹಸಿಲ್ದಾರ್ ಕಛೇರಿಯಿಂದ ಬಂದಿದ್ದ ವಿಜಯ್ ಕುಮಾರ್ ಇವರಿಗೆ ಆರೋಪಿತರ ಧ್ವನಿಯನ್ನು ಗುರುತಿಸಲು ಆಗುತ್ತದೆಯಾ ಎಂದು ಕೇಳಿದರು, ಆಗ ವಿಜಯ ಕುಮಾರ್ ಇವರು ಆ ಲ್ಯಾಪ್‌ಟಾಪ್ ಧ್ವನಿ ಕೇಳಿ ಇಬ್ಬರು ಆರೋಪಿತರ ಧ್ವನಿಯನ್ನು ಗುರುತಿಸಿದರು.

17. ಆಗ 1 ನೇ ಆರೊಪಿ ಕೃಷ್ಣಕುಮಾರ್ ಇವರಿಗೆ ಲೋಕಾಯುಕ್ತ ಪೊಲೀಸ್ ಇನ್ಸ್ ಪೆಕ್ಟರ್ ಅವರ ಧ್ವನಿಯನ್ನು ಗುರುತಿಸಲು ಹೇಳಿದರು, ಆಗ 1 ನೇ ಆರೋಪಿ ಕೃಷ್ಣಕುಮಾರ್ ಆ ಧ್ವನಿಯಲ್ಲಿ ಡಿಸ್ಟರ್ಬೆನ್ಸ್ ಇದ್ದು, ಆ ಧ್ವನಿಯನ್ನು ಗುರುತಿಸಲು ಆಗುವುದಿಲ್ಲ ಎಂದು ಹೇಳಿದರು. ಆರೋಪಿ ರಮೇಶ ಇವರಿಗೆ ಧ್ವನಿ ಗುರುತಿಸಲು ಕೇಳಿದಾಗ ಆರೋಪಿ ರಮೇಶ ಅವರ ಧ್ವನಿ ಇರಬಹುದು ಎಂದು ಹೇಳಿದರು.

18. ನಂತರ ಲೋಕಾಯುಕ್ತ ಪೊಲೀಸರು ಈ ಬಗ್ಗೆ ಒಂದು ಮಹಜರ್ ನ್ನು ಬರೆದು ಅದಕ್ಕೆ ಎಲ್ಲರ ಸಹಿಗಳನ್ನು ಪಡೆದರು. ಮತ್ತು ಆ ಸಿ.ಡಿ.ಯನ್ನು ವಶಪಡಿಸಿಕೊಂಡರು. ಈಗ ತೋರಿಸಿದ ನಿ.ಪಿ. 41 ಅದೇ ಆ ಮಹಜರ್ ಆಗಿದ್ದು, ಅದರ ಮೇಲೆ ಸಾಕ್ಷಿ ರುಜು ಈಗಾಗಲೇ ನಿ.ಪಿ. 41(ಎ) ಎಂದು ಗುರುತಿಸಲಾಗಿದೆ.

19. ಈಗ ತೋರಿಸಿದ ಒಂದು ಕವರ್ ಮತ್ತು ಸಿ.ಡಿ. ನೋಡಲಾಗಿ ಅದೇ ಆ ಸಿ.ಡಿ. ಕವರ್ ಆಗಿದ್ದು, ಅದನ್ನು ಈಗಾಗಲೇ ಎಂ.ಒ.1 ಎಂದು ಗುರುತಿಸಲಾಗಿದೆ. ಅದಕ್ಕೆ ಅಂಟಿಸಿದ ಚೀಟಿ ಮೇಲೆ ನನ್ನ ಸಹಿ ಇರುತ್ತದೆ. ಸಾಕ್ಷಿ ಸಹಿಯನ್ನು ಎಂ.ಒ. 1(ಎ) ಎಂದು ಗುರುತಿಸಲಾಯಿತು.

20. ಈಗ ತೋರಿಸಿದ ಎಂ.ಒ 11 ನೋಡಲಾಗಿ ಅವೇ ರೂ. 1000 ಮುಖಬೆಲೆಯ 100 ನೋಟುಗಳು 1 ನೇ ಆರೋಪಿ ಕೃಷ್ಣಕುಮಾರ್ ಇವರ ಮನೆಯಿಂದ ಅಮಾನತ್ತುಪಡಿಸಿದ ವಸ್ತುಗಳಾಗಿರುತ್ತವೆ.

**-: ಪಾಟೀ ಸವಾಲು: ಶ್ರೀ ಬಿ.ಎಂ.ಎಲ್.ಜಿ ಆರೋಪಿ ಪರ ವಕೀಲರಿಂದ:-**
**ಮತ್ತು 2 ನೇ ಆರೋಪಿ ಪರವಾಗಿ: ಶ್ರೀ ಎಸ್.ಹೆಚ್.ಎಂ.ಕೆ**
**ವಕೀಲರಿಂದ:-**

ಶ್ರೀ ಬಿ.ಎಂ.ಎಲ್.ಜಿ. ವಕೀಲರು ಈ ದಿನ ಆರೋಪಿತರು ಬಂದಿರುವುದಿಲ್ಲ, ಆದ ಕಾರಣ ಸ್ವಲ್ಪ ಮಾಹಿತಿ ತೆಗೆದುಕೊಂಡು ಪಾಟೀ ಸವಾಲು ಮಾಡಬೇಕಾಗಿದ್ದು, ಸಮಯ ಕೊಡಬೇಕೆಂದು ಕೋರಿರುತ್ತಾರೆ, ನ್ಯಾಯ ದೃಷ್ಟಿಯಿಂದ ಸಮಯವನ್ನು ಕೊಡಲಾಗಿದೆ.

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)**

**ಓ.ಹೇ.ಕೇ.ಸ.ಇ.ಎ.ಒ.**

Sd/- 25-08-2018
**(ಪಿ.ಎನ್.ದೇಸಾಯಿ)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ಹಾಗೂ ವಿಶೇಷ ನ್ಯಾಯಾಧೀಶರು,**
**ಚಿಕ್ಕಮಗಳೂರು.**